ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಯಚೂರಿನ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ರಾಜ್ಯ ಸರ್ಕಾರದ ವತಿಯಿಂದ ಪುನರ್ ಪ್ರಾರಂಭಿಸಲು ಅವಶ್ಯವಿರುವ ಹುದ್ದೆಗಳನ್ನು ಸೃಜಿಸುವ ಬಗ್ಗೆ.

*****

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಆಕುಕ 282 ಸಿಜಿಎಂ 2012, ದಿನಾಂಕ 24.05.2012.
2. ಸರ್ಕಾರದ ಆದೇಶ ಸಂಖ್ಯೆ:ಆಕುಕ 138 ಎಂಎಸ್ಎಫ್ 2011, ದಿನಾಂಕ 03.11.2012
3. ವಿಶೇಷಾಧಿಕಾರಿಗಳು, ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರ ಪತ್ರ ಸಂಖ್ಯೆ:RGSSH/OSD/1/2012-13, ದಿನಾಂಕ 09.11.2012

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ತನ್ನ ವ್ಯಾಪ್ತಿಯಲ್ಲಿದ್ದ ಹಾಗೂ ಹೈದರಾಬಾದ್ ಅಪೋಲೋ ಆಸ್ಪತ್ರೆಗಳ ಸಮೂಹಕ್ಕೆ ಗುತ್ತಿಗೆ ಆಧಾರದ ಮೇಲೆ ನೀಡಲ್ಪಟ್ಟಿದ್ದ ಮತ್ತು ಸದರಿ ಗುತ್ತಿಗೆ ಅವಧಿಯು ಮುಕ್ತಾಯಗೊಂಡಿದ್ದ ಕಾರಣ, ರಾಯಚೂರಿನ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಸ್ತುತ ಯಾವ ಹಂತದಲ್ಲಿದೆಯೋ ಆ ಸ್ಥಿತಿಯಲ್ಲಿಯೇ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ವರ್ಗಾಯಿಸಿ ಆದೇಶಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಯಚೂರಿನ ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ರಾಜ್ಯ ಸರ್ಕಾರದ ವತಿಯಿಂದ ಪುನರ್ ಪ್ರಾರಂಭಿಸಿ, ಬೋಧಕ ಹುದ್ದೆಗಳನ್ನೊಳಗೊಂಡಂತೆ ಒಟ್ಟು 146 ಸಮೂಹ 'ಎ' ವೃಂದದ ಹುದ್ದೆಗಳನ್ನು, ಶುಶ್ರೂಷಕರ ಹುದ್ದೆಗಳನ್ನೊಳಗೊಂಡಂತೆ ಒಟ್ಟು 13 ಸಮೂಹ 'ಬಿ' ವೃಂದದ ಹುದ್ದೆಗಳನ್ನು, ತಾಂತ್ರಿಕ ಹುದ್ದೆಗಳನ್ನೊಳಗೊಂಡಂತೆ ಒಟ್ಟು 329 ಸಮೂಹ 'ಸಿ' ವೃಂದದ ಹುದ್ದೆಗಳನ್ನು ಮತ್ತು 160 ಸಮೂಹ 'ಡಿ' ವೃಂದದ ಹುದ್ದೆಗಳನ್ನು ಈ ರೀತಿಯಾಗಿ ಒಟ್ಟು 648 ವಿವಿಧ ವೃಂದದ ಹುದ್ದೆಗಳನ್ನು **ಸೃಜಿಸಲು** ಹಾಗೂ ಸದರಿ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಅವಶ್ಯವಿರುವ ಉಪಕರಣಗಳನ್ನು **ಖರೀದಿಸಲು** ರೂ.2002.50 ಲಕ್ಷಗಳ (ಎರಡು ಸಾವಿರದ ಎರಡು ಲಕ್ಷಗಳ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಅನಾವರ್ತಕ ವೆಚ್ಚಕ್ಕಾಗಿ ಮತ್ತು ಸದರಿ ಸಂಸ್ಥೆಯ ವಾರ್ಷಿಕ ನಿರ್ವಹಣೆಗಾಗಿ ರೂ.1929.82 ಲಕ್ಷಗಳ (ಒಂದು ಸಾವಿರದ ಒಂಬೈನೂರ ಇಪ್ಪತ್ತೊಂಬತ್ತು ಲಕ್ಷದ ಎಂಬತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಆವರ್ತಕ ವೆಚ್ಚಕ್ಕಾಗಿ ಈ ರೀತಿಯಾಗಿ ಒಟ್ಟು ರೂ.3932.32 ಲಕ್ಷಗಳ (ಮೂರು ಸಾವಿರದ ಒಂಬೈನೂರ ಮೂವತ್ತೆರಡು ಲಕ್ಷಗಳ ಮೂವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ವೆಚ್ಚಕ್ಕೆ ಅನುಮೋದನೆ ನೀಡಿ, ಸದರಿ ಅನುದಾನವನ್ನು ಒದಗಿಸಲು ಈ ಸಂಸ್ಥೆಯಲ್ಲಿ ಮೇಲ್ಕಾಣಿಸಿದಂತೆ ಸೃಜಿಸಬೇಕಾದ ವಿವಿಧ ವೃಂದದ ಹುದ್ದೆಗಳ ಹಾಗೂ ವಿವಿಧ ವಿಭಾಗಗಳಿಗೆ ಖರೀದಿಸಬೇಕಾದ ಉಪಕರಣಗಳ ಮತ್ತು ಇದಕ್ಕಾಗಿ ತಗಲುವ ವೆಚ್ಚದ ಸಂಪೂರ್ಣ ವಿವರಗಳನ್ನೊಳಗೊಂಡ ಪ್ರತ್ಯೇಕ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಮಂಜೂರಾತಿ ಪಡೆಯತಕ್ಕದ್ದೆಂಬ ಷರತ್ತಿನ ಮೇರೆಗೆ ಸರ್ಕಾರದ **ತತ್ವಶ: (in principle) ಮಂಜೂರಾತಿ** ನೀಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ವಿಶೇಷಾಧಿಕಾರಿಗಳು, ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ತಮ್ಮ ಆಸ್ಪತ್ರೆಯನ್ನು ಸರ್ಕಾರದ ವತಿಯಿಂದ ಪುನರ್ ಪ್ರಾರಂಭಿಸಲು ಸರ್ಕಾರವು 648 ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಸೃಜಿಸಲು ಹಾಗೂ ವಿವಿಧ ವಿಭಾಗಗಳಲ್ಲಿ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಒಟ್ಟಾರೆ ರೂ.3932.32 ಲಕ್ಷಗಳ ವೆಚ್ಚಕ್ಕೆ ಅನುಮೋದನೆ ನೀಡಿದ್ದು,ಪ್ರಾಥಮಿಕವಾಗಿ ಈ ಆಸ್ಪತ್ರೆಯನ್ನು ಪ್ರಾರಂಭಿಸಲು ಈ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಒಟ್ಟು 648 ಹುದ್ದೆಗಳ ಪೈಕಿ 396 ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸಿ, ಇದಕ್ಕೆ ತಗಲುವ ವೆಚ್ಚ ರೂ.1148.38 ಲಕ್ಷಗಳನ್ನು, ಉಪಕರಣಗಳ ಖರೀದಿಗಾಗಿ ರೂ.1302.50 ಲಕ್ಷಗಳನ್ನು ಮತ್ತು ಇತರೆ ವೆಚ್ಚಕ್ಕಾಗಿ ರೂ.703.00 ಲಕ್ಷಗಳನ್ನು ಈ ರೀತಿಯಾಗಿ ಒಟ್ಟಾರೆಯಾಗಿ ರೂ.3153.00 ಗಳ ಮೊತ್ತದಲ್ಲಿ ಈಗಾಗಲೇ ಒದಗಿಸಲಾಗಿರುವ ರೂ.200.00 ಲಕ್ಷಗಳನ್ನು ಹೊರತುಪಡಿಸಿ ರೂ.2953.88 ಲಕ್ಷಗಳನ್ನು ಆವರ್ತ ಮತ್ತು ಅನಾವರ್ತ ಮತ್ತು ಇತರೆ ವೆಚ್ಚಗಳಿಗಾಗಿ ಪ್ರಸಕ್ತ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-01-110-2-37 ರಡಿ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಈ ಪ್ರಸ್ತಾವನೆಯ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿದ್ದು, ಆರ್ಥಿಕ ಇಲಾಖೆಯು ಕೆಳಕಂಡ 200 ವಿವಿಧ ವೃಂದದ ಹುದ್ದೆಗಳನ್ನು ಸೃಜಿಸಲು ಸಹಮತಿಸಿರುತ್ತದೆ.

| ಕ್ರಮ ಸಂಖ್ಯೆ | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1. | ಪ್ರಾಧ್ಯಾಪಕರು | 65 (ಅರವತ್ತೈದು) |
| 2. | ಸಹ ಪ್ರಾಧ್ಯಾಪಕರು | |
| 3. | ಸಹಾಯಕ ಪ್ರಾಧ್ಯಾಪಕರು | |
| 4. | ಮುಖ್ಯ ಆಡಳಿತಾಧಿಕಾರಿ | |
| 5. | ಆರ್ಥಿಕ ಸಲಹೆಗಾರರು | |
| 6. | ಹಿರಿಯ ನಿವಾಸಿಗಳು | |
| 7. | ಬೋಧಕರು | |
| 8. | ಗ್ರೂಪ್-ಬಿ ಹುದ್ದೆಗಳು | |
| 9. | ಗ್ರೂಪ್-ಸಿ ಹುದ್ದೆಗಳು | 100 (ಒಂದು ನೂರು) |
| 10. | ಗ್ರೂಪ್-ಡಿ ಹುದ್ದೆಗಳು | 35 (ಮೂವತ್ತೈದು) |
| | ಒಟ್ಟು | 200 (ಇನ್ನೂರು) |

ಆದರೆ, ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವಿಶೇಷಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ 30.01.2013 ರ ಪತ್ರದಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತಿನ ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸಲು ಅನುವಾಗುವಂತೆ ತಮ್ಮ ಸಂಸ್ಥೆಗೆ ಮೇಲ್ಕಂಡಂತೆ ಮಂಜೂರಾಗಿರುವ ಒಟ್ಟು 200 ಹುದ್ದೆಗಳನ್ನು ಕೆಳಕಂಡಂತೆ ವರ್ಗೀಕರಿಸಿ ಆದೇಶಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

| Sl. No | Name of the Post | Pay Scale | No of Post |
|---|---|---|---|
| | **GROUP "A" POSTS** | | |
| 1 | **Director** | 37400-67000+ AGP10000 | 1 |

| | | | |
|---|---|---|---|
| 2 | Prof. of Neurology | 37400-67000+ AGP10000 | 1 |
| 3 | Prof. of Neurosurgery | 37400-67000+ AGP10000 | 1 |
| 4 | Prof. of Cardiology | 37400-67000+ AGP10000 | 1 |
| 5 | Prof. of Cardio Thoracic Surgery | 37400-67000+ AGP10000 | 1 |
| 6 | Prof. of Urology | 37400-67000+ AGP10000 | 1 |
| 7 | Prof. of Nephrology | 37400-67000+ AGP10000 | 1 |
| 8 | Prof. of Paediatric Surgery | 37400-67000+ AGP10000 | 1 |
| 9 | Prof. of Facio- Maxillary / Oral Medicine | 37400-67000+ AGP10000 | 1 |
| 10 | Prof. of Anesthesiology | 37400-67000+ AGP10000 | 1 |
| 11 | Prof. of Plastic Surgery | 37400-67000+ AGP10000 | 1 |
| 1 | **Associate** Prof. of Neurology | 37400-67000+ AGP 9000 | 1 |
| 2 | Associate Prof. of Cardio Thoracic Surgery | 37400-67000+ AGP 9000 | 1 |
| 3 | Associate Prof. of Urology | 37400-67000+ AGP 9000 | 1 |
| 4 | Associate Prof. of Nephrology | 37400-67000+ AGP 9000 | 1 |
| 5 | Associate Prof. of Paediatric surgery | 37400-67000+ AGP 9000 | 1 |
| 6 | Associate Prof. of Anesthesiology | 37400-67000+ AGP 9000 | 1 |
| 1 | **Assistant** Prof. of Neurology | 15600-39100+ AGP 8000 | 2 |
| 2 | Assistant Prof. of Neurosurgery | 15600-39100+ AGP 8000 | 2 |
| 3 | Assistant Prof. of Cardiology | 15600-39100+ AGP 8000 | 2 |
| 4 | Assistant Prof. of Cardio Thoracic Surgery | 15600-39100+ AGP 8000 | 2 |
| 5 | Assistant Prof. of Urology | 15600-39100+ AGP 8000 | 2 |
| 6 | Assistant Prof. of Nephrology | 15600-39100+ AGP 8000 | 2 |
| 7 | Assistant Prof. of Paediatric Surgery | 15600-39100+ AGP 8000 | 2 |
| 8 | Assistant Prof. of Anesthesiology | 15600-39100+ AGP 8000 | 4 |